ದಿನಾಂಕಃ 04.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ-

02. ಚಾಸಾ.1 ಮತ್ತು ನಾನು ಜೊತೆಯಲ್ಲಿ ಶ್ರೀರಾಮ ಎಜೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದೆವು. ಚಾಸಾ.11 ಕೂಡ ನಮ್ಮ ಜೊತೆ ಕೆಲಸ ಮಾಡುತ್ತಿದ್ದರು. ಮೃತ 3 ನೇ ಆರೋಪಿ ಚಂದ್ರು ಸಿಂಗ್ ನಾವು ಕೆಲಸ ಮಾಡುತ್ತಿದ್ದ ಸಂಸ್ಥೆಯ ವಾಹನ ಚಾಲಕರಾಗಿದ್ದರು. ಚಾಸಾ.3 ನಮ್ಮ ಸಂಸ್ಥೆಯ ಮಾಲೀಕರಾಗಿದ್ದರು.

03. ನಾನು ಮತ್ತು ಚಾಸಾ.11 ರವರು ಸದರಿ ಶ್ರೀರಾಮ ಎಜೆನ್ಸಿಯಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದೆವು. ಚಾಸಾ.1 ರವರು ಅದೇ ಸಂಸ್ಥೆಯಲ್ಲಿ ಕ್ಯಾಶಿಯರ್ ಕೆಲಸ ಮಾಡುತ್ತಿದ್ದರು. ನಾವು ನಮ್ಮ ಸಂಸ್ಥೆಯ ಐಶರ್ ಗೂಡ್ಸ ವಾಹನದಲ್ಲಿ ಪ್ರಯಾಣ ಮಾಡುತ್ತಿದ್ದೆವು.

04. ಆಗಸ್ಟ 2015 ರಲ್ಲಿ ಒಂದು ದಿನ ಸಂಸ್ಥೆಯ ಗೂಡ್ಸ ವಾಹನದಲ್ಲಿ ನಾನು, ಚಾಸ.1 ಹಾಗೂ ಚಾಸಾ.11 ರವರು ಸೇರಿ ಸಾಮಾನುಗಳನ್ನು ಲೋಡ್ ಮಾಡಿಕೊಂಡು ಡೆಲಿವರಿ ಮಾಡಲು ಆಲ್ದೂರು, ಬಾಳೆಹೊನ್ನೂರು, ಜಯಪುರ ಮತ್ತು ಶೃಂಗೇರಿ ಮಾರ್ಗವಾಗಿ ಹೊರಟಿದ್ದೆವು. ಮೃತ 3 ನೇ ಆರೋಪಿ ನಮ್ಮ ಗೂಡ್ಸ ವಾಹನದ ಚಾಲಕರಾಗಿದ್ದರು.

05. ನಾವು ಮದ್ಯಾಹ್ನ ಸುಮಾರು 3.00 ಗಂಟೆ ಸಮಯಕ್ಕೆ ಸಾಮಾನುಗಳನ್ನು ಡೆಲಿವರಿ ಮಾಡುತ್ತಾ ಬಾಳೆಹೊನ್ನೂರು ತಲುಪಿದ್ದೆವು. ಆ ಸಮಯದಲ್ಲಿ ಅಂದಾಜು ರೂ. ಮೂರು ಲಕ್ಷಗಳಷ್ಟು ಹಣವನ್ನು ನಾವು ಸಾಮಾನು ನೀಡಿ ಸಂಗ್ರಹಿಸಿದ್ದೆವು. ಸದರಿ ಹಣ ಚಾಸಾ.1 ರವರ ಬಳಿ ಇತ್ತು. ಬಾಳೆಹೊನ್ನೂರು ಕಾರ್ಪೊರೇಶನ್ ಬ್ಯಾಂಕಿನಲ್ಲಿ ರೂ.ಒಂದು ಲಕ್ಷವನ್ನು ಚಾಸಾ.3 ರವರ ಖಾತೆಗೆ ಜಮಾ

ಮಾಡಿದೆವು. ನಾವು ಅಲ್ಲಿಂದ ಹೊರಟು ಆಲ್ದೂರಿನ ಜೇನುಗದ್ದೆ ತಲುಪಿದಾಗ ರಾತ್ರಿ 10.30 ಗಂಟೆ ಸಮಯವಾಗಿತ್ತು. ಆ ಸಮಯದಲ್ಲಿ ಮಳೆ ಬರುತ್ತಿತ್ತು.

06. ನಾವು ಕೂದುವಳ್ಳಿ ಕ್ರಾಸಿಂಗ್ ಹತ್ತಿರ ಬರುತ್ತಿದ್ದಾಗ ನಮ್ಮ ಮುಂದಿನ ಒಂದು ಪಲ್ಸರ್ ಬೈಕು ಬಂದಿತ್ತು. ಸದರಿ ಬೈಕು ನಮ್ಮನ್ನು ಪಾಸಾಗಿ ಹೋಗಿದ್ದು ಪುನಃ ವಾಪಸ್ಸು ನಾವು ಇದ್ದ ಸ್ಥಳಕ್ಕೆ ಬಂತು. ಬೈಕಿನಲ್ಲಿ ಮೂವರು ವ್ಯಕ್ತಿಗಳು ಇದ್ದು ಅವರು ನಮ್ಮ ವಾಹನದ ಗ್ಲಾಸಿಗೆ ಎರಡು ಮೊಟ್ಟೆಗಳನ್ನು ಹೊಡೆದರು. ನಮ್ಮ ವಾಹನದ ಚಾಲಕ ವಾಹನ ನಿಲ್ಲಿಸಿದ.

07. ಆಗ ಸದರಿ ಬೈಕಿನಲ್ಲಿದ್ದವರ ಪೈಕಿ ಒಬ್ಬ ನಮ್ಮ ಬಳಿ ಚಾಕು ಹಿಡಿದುಕೊಂಡು ಬಂದ. ಇನ್ನೊಬ್ಬ ಕತ್ತಿ ಹಿಡಿದುಕೊಂಡು ಬಂದ. ನಮ್ಮ ವಾಹನದ ಎಡಡಭಾಗದಲ್ಲಿ ಚಾಸಾ.1 ಸಂತೋಷ ಕ್ಯಾಶ್ ಬ್ಯಾಗ್ ಹಿಡಿದುಕೊಂಡು ಕುಳಿತಿದ್ದ. ಮೇಲೆ ಹೇಳಿದ ಕತ್ತಿ ಹಿಡಿದುಕೊಂಡಿದ್ದ ವ್ಯಕ್ತಿ ಎಡಭಾಗದಲ್ಲಿ ಕುಳಿತಿ ಸಂತೋಷ ಬಳಿ ಬಂದ. ಚಾಕು ಹಿಡಿದು ಕೊಂಡುವ್ಯಕ್ತಿ ಬಲಬಾಗದಲ್ಲಿದ್ದ 3 ನೇ ಆರೋಪಿ ಬಳಿ ಬಂದು ಆತನ ಶರಟನ್ನು ಹಿಡಿದ. ಆಗ 3 ನೇ ಆರೋಪಿ ನಮ್ಮ ವಾಹನದಿಂದ ಕೆಳಗಿಳಿದ. ಚಾಸಾ.1 ರವರು ಕತ್ತಿ ಹಿಡಿದುಕೊಂಡು ವ್ಯಕ್ತಿ ಗ್ಲಾಸನ್ನು ಹೊಡೆಯುವಾಗ ತನ್ನ ಕೈಯನ್ನು ಅಡ್ಡ ಹಿಡಿದ. ಚಾಸಾ.1 ರವರ ಕೈಗೆ ಹೊಡೆತ ಬಿತ್ತು. ಕತ್ತಿ ಹಿಡಿದುಕೊಂಡು ವ್ಯಕ್ತಿ ನಮ್ಮ ಕಡೆ ಖಾರದ ಪುಡಿ ಒಗೆದ. ಚಾಸಾ.1 ರವರ ಬಳಿ ಇದ್ದ ಕ್ಯಾಶ್ ಬ್ಯಾಗು ಮತ್ತು ಬಿಲ್ ಪುಸ್ತಕ ಕಿತ್ತುಕೊಂಡ. ಅವರು ಮೂವರು ಸೇರಿ ಬೈಕಿನಲಿ ಚಿಕ್ಕಮಗಳೂರು ಕಡೆಗೆ ಹೊರಟುಹೋದರು.

08. ನಾವು ತಕ್ಷಣ ಚಾಸಾ.3 ರವರಿಗೆ ಕರೆ ಮಾಡಿದೆವು. ಚಾಸಾ.3 ರವರು ನಮಗೆ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಲು

ಹೇಳಿದರು. ಚಾಸಾ.1 ರವರು ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು. ನಂತರ ನಾವು ಆಸ್ಪತ್ರೆಯಿಂದ ಚಿಕ್ಕಮಗಳೂರು ನಗರ ಠಾಣೆಗೆ ದೂರು ಸಲ್ಲಿಸಲು ಹೋದೆವು. ಚಿಕ್ಕಮಗಳೂರು ನಗರ ಪೋಲೀಸರು ಆಲ್ದೂರು ಠಾಣೆಯಲ್ಲಿ ದೂರು ಸಲ್ಲಿಸಲು ಹೇಳಿದ್ದರಿಂದ ನಾವು ಆಲ್ದೂರು ಪೋಲೀಸ್ ಠಾಣೆಗೆ ಹೋದೆವು. ಚಾಸಾ.1 ರವರು ಈ ಬಗ್ಗೆ ದೂರು ಸಲ್ಲಿಸಿದರು.

09. ಬೈಕಿನಲ್ಲಿ ಬಂದ ಮೂರು ಜನರ ಪೈಕಿ ಈಗ ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ಕೂಡ ಇದ್ದ. ನಾವು ದೂರು ಸಲ್ಲಿಸಲು ಹೋದಾಗ ಪೋಲೀಸರು ನಮ್ಮನ್ನು ವಿಚಾರಿಸಿದರು. ದೂರು ಸಲ್ಲಿಸಿದ ಮೂರು ದಿನಗಳ ನಂತರ ಪೋಲೀಸರು ನಮ್ಮನ್ನು ಠಾಣೆಗೆ ಕರೆಸಿದ್ದರು. ನಾವು ಠಾಣೆಗೆ ಹೋದೆವು. ಠಾಣೆಯಲ್ಲಿ ಒಟ್ಟು ಏಳು ಜನ ವ್ಯಕ್ತಿಗಳು ಇದ್ದರು. ನಾನು ಅವರನ್ನು ನೋಡಿದೆ. ಪೋಲೀಸರು ನನ್ನನ್ನು ವಿಚಾರಿಸಿದರು.

10. ನಾವು ಪ್ರಯಾಣಿಸುತ್ತಿದ್ದ ನಮ್ಮ ಸಂಸ್ಥೆಯ ಗೂಡ್ಸ ವಾಹನದ ಭಾವಚಿತ್ರವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದೆ. ಮೇಲೆ ಹೇಳಿದ ಘಟನೆ ನಡೆದ ಸ್ಥಳದ ಭಾವಚಿತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.07 ಎಂದು ಗುರುತಿಸಲಾಯಿತು.

11. ಮೇಲೆ ಹೇಳಿದ ವ್ಯಕ್ತಿಗಳ ಕೈಯಲ್ಲಿದ್ದ ಖಾರದ ಪುಡಿ, ನಮ್ಮ ವಾಹನದ ಒಡೆದ ಗಾಜಿನ ಚೂರುಗಳು, ಚಾಕು ಮತ್ತು ಕತ್ತಿಯನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 4 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ ಆರೋಪಿತರ ಪರವಾಗಿ

ಆರೋಪಿ ಪರ ವಕೀಲರು ಕಲಂ.231(2) ರಡಿಯಲ್ಲಿ ಅರ್ಜಿ ಸಲ್ಲಿಸಿದ್ದು ಪಾಟೀ ಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಮಂಜುನಾಥ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿಯ ಸಹಿ